7ನೆಯ ತರಗತಿ

ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ 2026

ವಿಷಯ : ದ್ವಿತೀಯ ಭಾಷೆ – ಕನ್ನಡ

ಸಮಯ : 1.30 ಗಂಟೆಗಳು **ಗರಿಷ್ಠ ಅಂಕಗಳು : 40**

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ:– **6 x 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳು ____________
   ಅ) 25 ಆ) 13 ಇ) 10 ಈ) 9

2. ಆಶ್ಚರ್ಯ ಸೂಚಕ ಚಿಹ್ನೆ ಇದು ____________
   ಅ) ! ಆ) ? ಇ) " " ಈ) ;

3. "ಬೆಳಕು" ಪದದ ವಿರುದ್ಧಾರ್ಥಕ ಪದ ____________
   ಅ) ಸೂರ್ಯ ಆ) ಚಂದ್ರ ಇ) ಕತ್ತಲು ಈ) ಮುಗಿಲು

4. "ಕಡಲು" ಪದದ ಸಮಾನಾರ್ಥಕ ಪದ ____________
   ಅ) ಸೂರ್ಯ ಆ) ಸಮುದ್ರ ಇ) ಶಿಖರ ಈ) ಪರ್ವತ

5. "ಶ್ರಾವಣ ಬಂತು ಕಾಡಿಗೆ" ಪದ್ಯವನ್ನು ಬರೆದ ಕವಿ ____________
   ಅ) ಕುವೆಂಪು ಆ) ಸತ್ಯಾರ್ಥಿ ಇ) ದ.ರಾ ಬೇಂದ್ರೆ ಈ) ಕಂಬಾರ

6. ಅಕ್ಬರನಿಗೆ ಅಸಮಾಧಾನ ಉಂಟು ಮಾಡಿದ ವ್ಯಕ್ತಿ ____________
   ಅ) ಮಾನ್ ಸಿಂಗ್ ಆ) ಬೀರಬಲ್ ಇ) ಅಬುಲ್ ಫಜಲ್ ಈ) ತೋದರ ಮಲ್ಲ

II. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ:– **4 x 1 = 4**

7. ಲೋಕಾಮೃತ =
8. ವಿದ್ಯುದ್ದೀಪ =
9. ಮುಖವನ್ನು =
10. ಅತ್ಯುತ್ತಮ =

III. ಈ ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ :– **3 x 1 = 3**

11. ಜ್ಞಾನ :–
12. ತ್ಯಾಗಿ :–
13. ಅನ್ನದಾನ :–

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :– **6 x 1 = 6**

14. ಕನ್ನಡ ಸೀಮೆಯ ಜನರ ಮನಸ್ಸು ಎಂತಹದ್ದು ?
15. ಭಾರತ ದೇಶದ ಸಿರಿಮುಡಿ ಯಾವುದು?
16. ಪಿಸುಮಾತಿನ ಗುಂಬಜ್ ಎಲ್ಲಿದೆ ?

Scanned with OKEN Scanner

17. ಅನ್ನದಾತ ಎಲ್ಲಿ ದುಡಿಯುವನು ?

18. ಅರಮನೆಯನ್ನು ಪ್ರವೇಶಿಸಿದ ಸಾಧು ಹೇಗಿದ್ದನು ?

19. ಶ್ರಾವಣದ ಬಿರುಗಾಳಿಯೂ ಯಾವ ರೂಪ ತಾಳಿದೆ ಎಂದು ಬೇಂದ್ರೆಯವರು ಹೇಳಿದ್ದಾರೆ ?

4 x 1 = 4

V. ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?

20. "ಅರೇ! ಇಲ್ಲೇನು ಮಾಡುತ್ತಿದ್ದೀಯಾ"?

21. "ನನ್ನ ಮಂತ್ರಿ ಬೀರಬಲ್ ಕಾಣೆಯಾಗಿದ್ದಾನೆ"

22. ಬಡತನ ಶ್ರೀಮಂತಿಕೆ ಕೊನೆತನಕ ಇರುವುದಿಲ್ಲ.

23. "ಎಂಥಾ ಕೆಲಸ ಆಗಿ ಹೋಯಿತು"

3 x 2 = 6

VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :–

24. ಬೇಡನು ಹುಡುಗನನ್ನು ಯಾವ ರೀತಿ ಉಪಚರಿಸಿದನು ?

25. ಮೈಸೂರು ಅರಮನೆಯ ಸೊಬಗನ್ನು ವರ್ಣಿಸಿರಿ.

26. ಬೇಂದ್ರೆಯವರು ಶ್ರಾವಣ ಎಲ್ಲೆಲ್ಲಿಗೆ ಬಂತು ಎಂದು ಹೇಳಿದ್ದಾರೆ ?

1 x 3 = 3

VII. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ :–

ಭರತ ______________________________

____

____

______________________________ ಕಟ್ಟಲು.

ಅಥವಾ

ಭರತ ______________________________

____

____

______________________________ ಮೆಟ್ಟಲು

VIII. ಈ ಕೆಳಗಿನ ಚಿತ್ರವನ್ನು ಗಮನಿಸಿ, ಚಿತ್ರಕ್ಕೆ ಸಂಬಂಧಿಸಿದಂತೆ 4 / 5 ವಾಕ್ಯಗಳನ್ನು ಬರೆಯಿರಿ :– 1 x 4 = 4

IX. ಪ್ರವಾಸಕ್ಕೆ ಹೋಗುವುದಾಗಿ ತಿಳಿಸಿ ನಾಲ್ಕು ದಿನಗಳ ರಜೆಯನ್ನು ಕೋರಿ, ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಪತ್ರ ಬರೆಯಿರಿ. 1 x 4 = 4

* * * *

Scanned with OKEN Scanner